ಬ್ಯಾಸರಾ ಮಾಡಿಕೊಳ್ಳಲಿಲ್ಲ. ಶರಣಪ್ಪನನ್ನು ಇನ್ನಷ್ಟು ಶುದ್ಧೀಕರಿಸುವ ಅಗತ್ಯ ತೋರಿದ್ದರಿಂದ ಎದ್ದ ಶರಣಪ್ಪನನ್ನು ರೂಪಿಸುವ ಕೆಲಸಕ್ಕೆ ಆಫೀಸಿನ ಪರಿಸರ ತಕ್ಕುದಾಗಿರಲಿಲ್ಲ. ಸಂಜೆ ಬಾರ್‌ಗೆ ಎಳೆದೊಯ್ದ್ರು. ಇವರೊಂದಿಗೆ ಒಂದಿಬ್ಬರು ಹಾರಿಬಂದರು, ಮತ್ತಿಬ್ಬರು ತೂರಿಬಂದರು.

ಎದುರಿಗೆ ತುಂಬಿದ ಗ್ಲಾಸುಗಳನ್ನು ನೋಡುತ್ತ ಶರಣಪ್ಪ ಬೆವತುಹೋದ. ತನ್ನನ್ನು ಹಾಳುಮಾಡದ ಹೊರತು ಇವರು ಬಿಡೂದಿಲ್ಲ ಅನ್ನುವುದು ಖಾತ್ರಿಯಾಗಿ ಚಿತ್ರಾರ್ಪಿತನಾಗಿ ಕೂತ. ಶರಟಿನ ಒಳಗೆ ಅವನು ಥರ ಥರಿಸುವುದು ಕಂಡರೂ ಯಾರೇನೂ ಕನಿಕರಿಸಲಿಲ್ಲ.

'ಯಾಕೆ ಹೆದರತಿಯೋ' ಗುಳೇದ ಪುಸಲಾಯಿಸಿದ. 'ಇದಕ್ಕೆಲ್ಲ ನೀನೇನೂ ರೊಕ್ಕ ಕೊಡಬೇಕಾಗಿಲ್ಲ. ಒಂದು ಸರ್ತಿ ರುಚಿ ನೋಡು. ಆಮ್ಯಾಲ ನೀನೇ ಬಿಡಂಗಿಲ್ಲ.'

ಅವರೆಲ್ಲ ಆರಾಮಾಗಿ ಗುಟುಕರಿಸುತ್ತಿದ್ದಂತೆ ಶರಣಪ್ಪನಿಗೆ ತನ್ನ ಹಣೇಬರಾ ಇಷ್ಟೇ ಅನಿಸಿಬಿಟ್ಟಿತು. ತನ್ನನ್ನು ಸುತ್ತುಗಟ್ಟಿದ ಅವರನ್ನು ದೈನ್ಯದಿಂದ ನೋಡಿದ. ಕುಡಿದ ಅಮಲಿನಲ್ಲಿ ಅವರೆಲ್ಲ ಅದೆಷ್ಟು ವಿಕಾರವಾಗಿ ಕಾಣುತ್ತಿದ್ದಾರೆ! ಅದೇನು ನಗೂನೋ, ಚಾಷ್ಟಿನೋ? ಅದೊಂದು ಸಾರ್ವಜನಿಕ ಸ್ಥಳ ಅನ್ನೋದನ್ನೂ ಮರೆತವರ ಹಂಗ ಹಸಿದ ಮೃಗಗಳಂತೆ ಊಳಿಡುತ್ತಿದ್ದಾರೆ. ತಾನು ಮುದುರಿಕೊಂಡಷ್ಟೂ ಅವರೆಲ್ಲ ರೆಕ್ಕೆ ಹರಡಿ ಹದ್ದಾಗಿ ಆವರಿಸಿದ ಭಾಸ. ಇನ್ನು ತನಗೆ ನೆಲ, ನೀರು, ಆಕಾಶದೊಳಗೆ ರಕ್ಷಣೆ ಇಲ್ಲ ಎಂದವನಿಗೆ ಮನದಟ್ಟಾಗಿ ಹೋತು.

★★★

ಆಫೀಸಿನ ಕೆಲಸ ಕಾರ್ಯಗಳಲ್ಲಿ ಈಗ ಶರಣಪ್ಪ ಪಳಗಿಬಿಟ್ಟಿದ್ದರೂ, ಸಾರ್ವಜನಿಕರ ತಪ್ಪನ್ನು ಸರಿಪಡಿಸಲು ತಾವು ವಿಧಿಸುವ ಫೀ ನೇ ಲಂಚ ಎಂದುಕೊಳ್ಳುವಾಗ ಅವನಿಗೆ ಅಪರಾಧ ಮನೋಭಾವ ತಪ್ಪಿಯೇ ಇಲ್ಲ. ಬಂದ ಕೆಲವು ಪಾರ್ಟಿಗಳು 'ಸರ್ಕಾರದ ಫೀ ಕಡಮಿ ಇದ್ದರೆ ಅದನ್ನು ಕೊಡತೀವಿ. ನಿಮ್ಮ ಫೀ ಕಡಮಿ ಇದ್ದರೆ ಅದನ್ನ ಕೊಡತೀವಿ' ಎಂದು ತರ್ಕದ ಮಾತಾಡಿದಾಗ ಅವರ ವ್ಯವಹಾರ ಕುಶಲತೆಗೆ ಶರಣಪ್ಪ ಕಣ್ಣರಳಿಸಿದ್ದಾನೆ. ರಾತ್ರಿ ಮನೆಯಲ್ಲಿ ಮಲಗಿದವನು ಪಾಪಭೀರುತನದಿಂದ ಮುಲುಗಿದ್ದಾನೆ. ಸಾಲಿವಳಗೆ ಕಲಿತದ್ದೆಲ್ಲ ನೆನಪಿಗೆ ಬರುತ್ತದೆ. ಆದರ್ಶವನ್ನು ಮೈಗೂಡಿಸಿಕೊಂಡಿದ್ದ ಮಾಸ್ತರು ಕಣ್ಣೆದುರು ಬರುತ್ತಾರೆ. 'ಎಲ್ಲಿ ಕೈ ಚಾಚು' ಎಂದು ಜಬರಿಸಿ ಕಣ್ಣು ಕೆಕ್ಕರಿಸುತ್ತಾರೆ. ಲಕ್ಕಿ ಬರ‍್ಲು ಬೀಸುತ್ತಾರೆ. ಸಾಲಿದೊಳಗ ಹೊಡೆತ ತಿಂದಾಗ ಒಂದೆರಡು ಸರ್ತಿ ಶರಣಪ್ಪನ ಚಡ್ಡಿ ಒದ್ದೆಯಾಗಿತ್ತು. ಈಗ ಹಾಸಿಗೆ!...

ಅಂತೂ ತನ್ನ ಮನೋಭಾವಕ್ಕೆ ಎಂದೂ ಒಗ್ಗದ ಸಹೋದ್ಯೋಗಿಗಳೊಂದಿಗೆ ಅವನು ಬೆರೆಯುವುದೇ ಕಡಿಮೆ. ಇವನು ತನ್ನ ಪಾಡಿಗೆ ಕೆಲಸ ಮಾಡುತ್ತಿದ್ದರೆ, ಕೆಲಸ ಮಾಡದೆ ಕೂತು ಸರ್ಕಾರದ ನಿಯಮಾವಳಿಗಳನ್ನು ಧಾರಾಳವಾಗಿ ದೂಷಿಸುವ ಅವರೆಲ್ಲ ತಮ್ಮ ತಮ್ಮೊಳಗೆ ಮಾತಾಡುವ ವಿಷಯ ಮಾತ್ರ ಹೊಲ, ಮನೆ, ಸೈಟು, ರೊಕ್ಕ, ಬೈಕು, ಕಾರು, ಪ್ರಮೋಷನ್ನು ಇವುಗಳ ಸೀಮಾರೇಖೆ ದಾಟಿಯೇ ಇಲ್ಲ. ಆದರೆ ಶರಣಪ್ಪ ಗುರುತಿಸಿರುವ ಹಂಗೆ ಈ ಪ್ರತಿಯೊಬ್ಬನಲ್ಲೂ ಧಾರ್ಮಿಕತೆ ಹೆಚ್ಚಾಗಿಬಿಟ್ಟಿದೆ. ಎಲ್ಲರೂ ಮನೆಯೊಳಗೆ ಸತ್ಯನಾರಾಯಣ, ಗಣಪತಿಹಬ್ಬ ವಿಜೃಂಭಣೆಯಿಂದ ಆಚರಿಸುತ್ತಾರೆ. ಸಂಕಷ್ಟಿ ವ್ರತ ಮಾಡುತ್ತಾರೆ. ಆಗಾಗ ಮಂತ್ರಾಲಯಕ್ಕೋ, ಶಿರಡಿಗೋ, ತಿರುಪತಿಗೋ ಹೋಗಿ ಬರುತ್ತಿರುತ್ತಾರೆ. ಹಣೆಯ ಮ್ಯಾಲೆ ಕುಂಕುಮ, ಗಂಧ, ವಿಭೂತಿ ಇಲ್ಲದ ದಿನವೇ ಇಲ್ಲ. ಆದರೆ ತಾನು?

'ಬರ‍್ತಾ ಬರ‍್ತಾ ಸಂಧ್ಯಾವಂದನಿ, ದೇವರ ಪೂಜಾ, ಭಜನಿ ಎಲ್ಲ ಬಿಟ್ಟುಬಿಡ್ರಿ. ಹಾಳಾದ್ದು ಕುಡೀಲಿಕ್ಕೆ ಕಲಿತುಬಿಟ್ರಿ' ಎಂದು ಹೆಂಡತಿ ಅಲವತ್ತುಕೊಳ್ಳುತಾನೇ ಇದ್ದಾಳೆ.